

# ತೇಲುವ ಕ್ರಿಸ್ಮಸ್ ಟ್ರೀ



ಪ್ರಪಂಚದಲ್ಲೇ ಅತೀ ದೊಡ್ಡ ತೇಲುವ ಕ್ರಿಸ್ಮಸ್ (ಟ್ರೀ) ಮರ ಬ್ರೆಜಿಲ್ ದೇಶದ ರಿಯೋ ಡಿ ಜನ್ಯೆರೋದಲ್ಲಿನ ರೊಡ್ರಿಗೋ ಡಿ ಫ್ರೈಟಸ್ ಸರೋವರದ ಮೇಲೆ ಅನಾವರಣಗೊಂಡಿದೆ. ಸಹಸ್ರಾರು ವಿದ್ಯುತ್ ದೀಪಗಳನ್ನು ಬೆಳಗಿಸುವುದರ ಮೂಲಕ ಈ ವರ್ಷದ ಕ್ರಿಸ್ಮಸ್ ಸಂಭ್ರಮಾಚರಣೆಯು ನವೆಂಬರ್ ತಿಂಗಳ ಕೊನೆಯ ದಿನದಿಂದಲೇ ಆರಂಭಗೊಂಡಿದೆ.

ಬಣ್ಣ ಬಣ್ಣದ ದೀಪಗಳನ್ನು, ಸುಮಧುರ ಸಂಗೀತ, ಪಟಾಕಿ ಸಿಡಿತ ಮುಂತಾದ ಕಾರ್ಯಕ್ರಮವನ್ನು ಸರೋವರದ ಸುತ್ತ ನೆರೆದ ಲಕ್ಷಾಂತರ ಜನ ವೀಕ್ಷಿಸಿ ಆನಂದಪಟ್ಟರು. 85 ಮೀಟರ್(ಸುಮಾರು 280 ಅಡಿ)ನಷ್ಟು ಎತ್ತರವಾಗಿರುವ ಗಗನ ಚುಂಬಿ ಕ್ರಿಸ್ಮಸ್ ಟ್ರೀಯನ್ನು 11 ಬೃಹತ್ ವೇದಿಕೆಯ ಮೇಲೆ ನಿರ್ಮಿಸಲಾಗಿದೆ.

ಜೀವನದ ಉತ್ಸವ (ಸೆಲಬ್ರೇಷನ್ ಆಫ್ ಲೈಫ್) ಎಂಬ ಥೀಮ್ನಲ್ಲಿ ರೂಪುಗೊಂಡ ಈ ಕ್ರಿಸ್ಮಸ್ ಟ್ರೀ, 542 ಟನ್ ತೂಕವಿದೆ. ಪ್ರತೀ ದಿನ ನೃತ್ಯ, ನಾಟಕ, ಸಂಗೀತ, ರಾತ್ರಿಯ ವೇಳೆ ಪಟಾಕಿ ಸಿಡಿತ ಮುಂತಾದ ಮನರಂಜನಾ ಕಾರ್ಯಕ್ರಮಗಳು ಹೊಸ ವರ್ಷದ ಮೊದಲನೆ ವಾರದವರೆಗೂ ನಡೆಯಲಿದ್ದು, ದೇಶ ವಿದೇಶದ ಯಾತ್ರಿಕರನ್ನು ಕೈ ಬೀಸಿ ಕರೆಯುತ್ತಿದೆ. 3.1 ದಶಲಕ್ಷ ವಿದ್ಯುತ್ ದೀಪಗಳಿಂದ ಅಲಂಕರಣಗೊಂಡ ಈ ಕ್ರಿಸ್ಮಸ್ ಟ್ರೀ ವಿಶ್ವದಲ್ಲೇ ಅತ್ಯಂತ ದೊಡ್ಡದಾದ ತೇಲುವ ಕ್ರಿಸ್ಮಸ್ ಟ್ರೀ ಎಂಬ ಗಿನ್ನೆಸ್ ವಿಶ್ವ ದಾಖಲೆಯ ಮನ್ನಣೆಗೆ ಪಾತ್ರವಾಗಿದೆ.

■ ವಿದ್ಯಾ ವಿ. ಹಾಲಭಾವಿ



